ಗಂಗಾವತಿಯಲ್ಲಿ ಸರಕಾರಿ ಕಿರಿಯ ಮಹಾ ವಿದ್ಯಾಲಯದಲ್ಲಿ ಉಪನ್ಯಾಸಕರ ಅಭಾವ ಮತ್ತು ವಿದ್ಯಾರ್ಥಿಗಳಿಂದ ಮುಷ್ಕರ ನಡೆಸುವ ಬಗ್ಗೆ

೩೬೦ (೨೬೫) ಶ್ರೀ ಎಚ್. ಎಸ್. ಮಂಜಪ್ಪೀಧರ (ಗಂಗಾವತಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಗಂಗಾವತಿ ನಗರದಲ್ಲಿಯೂ ಸರ್ಕಾರಿ ಕಿರಿಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಎರಡು ದಿನದಿಂದ ಮುಷ್ಕರ ಹೂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಈ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಸಂಖ್ಯೆ ಹೆಚ್ಚಿರುವುದರಿಂದ ಈಗಿದ್ದ ಉಪನ್ಯಾಸಕರ ಸಂಖ್ಯೆ ಕಡಿಮೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಕೂಡಲೇ ಕನ್ನಡ, ಇಂಗ್ಲೀಷ್ ಅಂಕಿಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥ ಶಾಸ್ತ್ರ, ಮತ್ತಿತರ ಅನೇಕ ವಿಷಯಗಳನ್ನು ಬೋಧಿಸಲು ಉಪನ್ಯಾಸಕರ ಹೊಸ ಜಾಗಗಳನ್ನು ಮಂಜೂರು ಮಾಡಿ ಈ ವಿದ್ಯಾಲಯದಲ್ಲಿ ನೇಮಕ ಮಾಡಲು ಉದ್ದೇಶಿಸಲಾಗಿದೆಯೇ ?

(ಈ) ಈ ವಿದ್ಯಾಲಯದಲ್ಲಿ ಈಗಿದ್ದ ವಿದ್ಯಾರ್ಥಿಗಳ ಸಂಖ್ಯೆ, ಉಪಾಧ್ಯಾಯರ ಸಂಖ್ಯೆ ಉಪ್ಪಾಧ್ಯಾಯ ವಿದ್ಯಾರ್ಥಿಗಳ ದಾಮಾಷಾದಂತೆ ಸರಿಯಾಗಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಇಲ್ಲಾ, ಈ ಬಗ್ಗೆ ಯಾವ ವರದಿಯೂ ಬಂದಿರುವುದಿಲ್ಲ.

(ಆ) ಮತ್ತು (ಇ) ವಾಣಿಜ್ಯ ವಿಷಯದಲ್ಲಿ ಮಾತ್ರ ಒಂದು ಅಧಿಕ ಉಪನ್ಯಾಸಕರ ಹುದ್ದೆ ಅವಶ್ಯಕವಿದೆ. ಬಾಕಿ ವಿಷಯಗಳಲ್ಲಿ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಉಪನ್ಯಾಸಕರ ಹುದ್ದೆ ಇರುವುದರಿಂದ ಹೆಚ್ಚಿಗೆ ನೇಮಕ ಮಾಡುವ ಅವಶ್ಯಕತೆ ಇಲ್ಲ.

(ಈ) ವಾಣಿಜ್ಯ ವಿಷಯದಲ್ಲಿ ಒಬ್ಬ ಉಪನ್ಯಾಸಕರ ಹೊರತು ಉಳಿದ ವಿಷಯಗಳಲ್ಲಿ ಉಪಾಧ್ಯಾಯ ವಿದ್ಯಾರ್ಥಿಗಳ ದಾಮಾಷಾ ಸರಿಯಾಗಿದೆ.

ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ನೇಮಕಗೊಂಡ ಸಮಾಜ ಶಿಕ್ಷಣಾಧಿಕಾರಿಗಳನ್ನು ಬಿ. ಡಿ. ಓ. ಆಗಿ ನೇಮಿಸುವ ಬಗ್ಗೆ

೩೬೧. (೨೬೮) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ನೇಮಕಗೊಂಡ ಸಮಾಜ ಶಿಕ್ಷಣಾಧಿಕಾರಿಗಳನ್ನು (ಎಸ್‌ಇಒ) ಬಿಡಿಓ (ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು) ಆಗಿ ನೇಮಿಸಬೇಕೆಂದು ತಾ॥ ೨೫-೧-೧೯೮೨ರ ಅಧಿಕಾರಿಗಳ ಉಚ್ಚ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಗಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ಸರ್ಕಾರದವರು ಇನ್ನೂ ಏಕೆ ಕಾರ್ಯ ಕೈಗೊಂಡಿರುವುದಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ದಿನಾಂಕ ೨೫-೧-೧೯೮೨ರಂದು ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಮಾಡಿದ ಸಲಹೆ ಈ ಕೆಳಗಿನಂತಿದೆ.—

ಅಭಿವೃದ್ಧಿ ಇಲಾಖೆಯ ಸೇವಾ ಮತ್ತು ನೇಮಕಾತಿ ನಿಯಮಾವಳಿಯನ್ನು ತಿದ್ದುಪಡಿ ಮಾಡಿ ಹಿಂದೆ ಮಾಡುತ್ತಿದ್ದಂತೆ ಸಮಾಜ ಶಿಕ್ಷಣಾಧಿಕಾರಿಗಳನ್ನು ಅಭಿವೃದ್ಧಿ ಇಲಾಖೆಯಲ್ಲಿ ನೇಮಕ ಮಾಡಲು